# ರೈನಾ ವಿದಾಯ



ಭಾರತದ ಕ್ರಿಕೆಟ್ ಪ್ರೇಮಿಗಳು ಇನ್ನು ಮುಂದೆ ಆಗಸ್ಟ್ 15ಅನ್ನು ಸ್ವಾತಂತ್ರ್ಯ ದಿನಾಚರಣೆ ಎಂದು ಮಾತ್ರ ನೆನಪಿಟ್ಟುಕೊಳ್ಳುವುದಿಲ್ಲ; ಬದಲಾಗಿ ಮಹೇಂದ್ರಸಿಂಗ್ ದೋನಿ ಮತ್ತು ಸುರೇಶ್ ರೈನಾ ವಿದಾಯದ ದಿನ ಎಂದೂ ನೆನಪಿಟ್ಟುಕೊಳ್ಳಬಹುದು. ಭಾರತ ಕ್ರಿಕೆಟ್ ತಂಡದ ಮಾಜಿ ಕಪ್ತಾನ ದೋನಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ವಿದಾಯ ಘೋಷಿಸಿದ ಬೆನ್ನಲ್ಲೇ, ಸ್ಫೋಟಕ ಬ್ಯಾಟ್ಸ್‌ಮನ್ ಸುರೇಶ್ ರೈನಾ ಕೂಡಾ 'ಅಲ್‌ವಿದಾ' ಹೇಳಿದ್ದಾರೆ. 33ರ ಹರೆಯದ ಈ ಎಡಗೈ ಬ್ಯಾಟ್ಸ್‌ಮನ್, ಏಕದಿನ ಪಂದ್ಯಗಳ ಭಾರತ ತಂಡದಲ್ಲಿ ದೋನಿಯ ಬಲಗೈ ಆಗಿದ್ದವರು. ಮಧ್ಯಮ ಕ್ರಮಾಂಕದಲ್ಲಿ ಈ ಜೋಡಿ ಭಾರತದ ಪರವಾಗಿ ಅತ್ಯಧಿಕ ರನ್‌ಗಳ ಜೊತೆಯಾಟವನ್ನು ಪದೇ ಪದೇ ನೀಡಿದೆ. ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ನ ನಾಯಕ ಉಪನಾಯಕ ಆಗಿರುವ ಈ ಜೋಡಿ ಕೆಲವೇ ನಿಮಿಷಗಳ ಅಂತರದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿರುವುದು ಕುತೂಹಲಕರ. 'ದೋನಿ ಆಗಸ್ಟ್ 15ರಂದು ನಿವೃತ್ತಿ ಪ್ರಕಟಿಸುತ್ತಾರೆ ಎನ್ನುವುದು ನನಗೆ ಗೊತ್ತಿತ್ತು. ನಾನು ಅವರನ್ನು ಫಾಲೋ ಮಾಡಬೇಕೆಂದು ಮೊದಲೇ ನಿರ್ಧರಿಸಿದ್ದೆ' ಎಂದಿದ್ದಾರೆ ರೈನಾ. ಮೈದಾನದಲ್ಲಿ ಶಿಸ್ತಿನಿಂದ ನಾಯಕನನ್ನು ಹಿಂಬಾಲಿಸಿದಂತೆಯೇ ರೈನಾ, ನಿವೃತ್ತಿ ನಿರ್ಧಾರದಲ್ಲೂ ಹಿಂಬಾಲಿಸಿದ್ದಾರೆ.

33ರ ಹರೆಯ ಕ್ರಿಕೆಟ್‌ನಲ್ಲಿ ಇತ್ತೀಚೆಗೆ ನಿವೃತ್ತಿಯ ವಯಸ್ಸೇನೂ ಅಲ್ಲ. ಆದರೆ ರೈನಾ ಮಟ್ಟಿಗೆ ಇದು ಅನಿವಾರ್ಯ ನಡೆಯೂ ಹೌದು. ಏಕೆಂದರೆ ಆತ ತನ್ನ ಅತ್ಯಂತ ಮೆಚ್ಚಿನ ಟಿ20 ಪಂದ್ಯವನ್ನು ಭಾರತದ ಪರ ಕೊನೆಯದಾಗಿ ಆಡಿದ್ದು 2018ರಲ್ಲಿ. ಅಲ್ಲಿಂದೀಚೆಗೆ ಏಕದಿನ ಪಂದ್ಯಗಳಲ್ಲಿ ಭಾಗವಹಿಸಿದ್ದರೂ ವಿದಾಯ ಸನಿಹದಲ್ಲೇ ಇದೆ ಎನ್ನುವುದು ರೈನಾಗೆ ಗೊತ್ತಿತ್ತು. ಆದರೆ ಆತನ ಅಭಿಮಾನಿಗಳ ಪಾಲಿಗೆ ಇದು ಸ್ವಲ್ಪ ಮಟ್ಟಿಗೆ ಅನಿರೀಕ್ಷಿತವೇ.

12 ವರ್ಷಗಳ ಕಾಲ ದೇಶದ ಪರವಾಗಿ ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿರುವುದು ಕಡಿಮೆ ಸಾಧನೆಯೇನಲ್ಲ. ಅದರಲ್ಲೂ ಏಕದಿನ ಪಂದ್ಯಗಳಲ್ಲಿ ರೈನಾ ಸದಾಕಾಲ ನಾಯಕ ದೋನಿಯ ಪ್ರಬಲ ಅಸ್ತ್ರವಾಗಿಯೇ ಮಿಂಚಿದರು. 226 ಏಕದಿನ ಪಂದ್ಯಗಳಲ್ಲಿ 5615 ರನ್ ಗಳಿಸಿರುವುದು, ಅದೂ 35.31 ಸರಾಸರಿಯಲ್ಲಿ ಮಧ್ಯಮ ಕ್ರಮಾಂಕದ ಅತ್ಯುತ್ತಮ ಸಾಧನೆಯೇ ಸರಿ. 2011ರ ವಿಶ್ವಕಪ್ ವಿಜೇತ ತಂಡದ ಸದಸ್ಯನಾಗಿ ರೈನಾ ಇವತ್ತಿಗೂ ಸ್ಮರಣಾರ್ಹರು.

ದೋನಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ್ದು 2004ರ ಡಿಸೆಂಬರ್‌ನಲ್ಲಿ ಬಾಂಗ್ಲಾ ವಿರುದ್ಧ. ರೈನಾ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಬಂದದ್ದು ಎಂಟು ತಿಂಗಳ ನಂತರ, 2005ರಲ್ಲಿ ಶ್ರೀಲಂಕಾ ವಿರುದ್ಧ. ಆಗಿನ್ನೂ ರೈನಾಗೆ 19ರ ಹರೆಯ. ಭಾರತದ ಟೆಸ್ಟ್ ತಂಡದಲ್ಲಿ ಸ್ಥಾನ ಪಡೆಯೋದಕ್ಕೆ ರೈನಾಗೆ ಮತ್ತೆ ಐದು ವರ್ಷ ಹಿಡಿಯಿತು. ಆದರೆ 2010ರಲ್ಲಿ ಆಡಿದ ಮೊದಲ ಟೆಸ್ಟ್‌ನಲ್ಲೇ ಶ್ರೀಲಂಕಾ ವಿರುದ್ಧ ಶತಕ ಬಾರಿಸಿದರು. ನಿವೃತ್ತಿಗೆ ಮುನ್ನ ದಾಖಲೆಗಳನ್ನು ಗಮನಿಸಿದರೆ 18 ಟೆಸ್ಟ್‌ಗಳು ಮತ್ತು 78 ಟಿ20 ಪಂದ್ಯಗಳಲ್ಲಿ ಆಡಿದ ಶ್ರೇಯಸ್ಸು.

ಎಲ್ಲ ಕ್ರಿಕೆಟಿಗರ ವೃತ್ತಿಜೀವನದಲ್ಲೂ ಕೆಲವು ಸ್ಮರಣಾರ್ಹ ಇನಿಂಗ್ಸ್‌ಗಳಿರುತ್ತವೆ. 2010ರಲ್ಲಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ರೈನಾ ಸಿಡಿಸಿದ ಶತಕ ಅಂತಹ ಒಂದು ಸ್ಮರಣಾರ್ಹ ಆಟ. ನಂ.3 ಆಟಗಾರನಾಗಿ ಮೈದಾನಕ್ಕೆ ಬಂದ ಈತ 60 ಎಸೆತಗಳಲ್ಲಿ ಮಿಂಚಿನ 101ರನ್ ಹೊಡೆದರು. ಅದು ಜಗತ್ತಿನ ಯಾವುದೇ ಆಟಗಾರನೊಬ್ಬ ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ಗಳಿಸಿದ ಮೊದಲ ಶತಕವೂ ಹೌದು! ಭಾರತ ಅವತ್ತು 20 ಓವರ್‌ಗಳಲ್ಲಿ 5ಕ್ಕೆ 186 ರನ್ ಸೇರಿಸಿತು. ಆಫ್ರಿಕಾದ ವಿರುದ್ಧ 14 ರನ್‌ಗಳ ಜಯವನ್ನೂ ದಾಖಲಿಸಿತು.

2015ರ ಏಕದಿನ ವಿಶ್ವಕಪ್‌ನಲ್ಲಿ ಜಿಂಬಾಬ್ವೆ ವಿರುದ್ಧ 110 ರನ್ ಬಾರಿಸಿದ್ದು ಅಂತಹ ಇನ್ನೊಂದು ಇನಿಂಗ್ಸ್. ಅವತ್ತು ರೈನಾ ಹೆಸರಲ್ಲಿ ವಿಶ್ವದಾಖಲೆಯೊಂದು ಬರೆಯಲ್ಪಟ್ಟಿತು. ಟಿ20 ಮತ್ತು ಏಕದಿನ ವಿಶ್ವಕಪ್ ಎರಡರಲ್ಲೂ ಶತಕ ಹೊಡೆದ ಮೊದಲ ಆಟಗಾರನೆಂಬ ದಾಖಲೆ. ಆರಂಭಿಕ ಆಟಗಾರರಿಗೆ ದಾಖಲೆಗಳನ್ನು ಪುಡಿಗಟ್ಟಲು ಅವಕಾಶ ಹೆಚ್ಚು. ಆದರೆ ರೈನಾ 4ರ ಕ್ರಮಾಂಕದಲ್ಲಿ ಬ್ಯಾಟಿಂಗಿಗೆ ಬಂದೂ ಹಲವು ವಿಶ್ವದಾಖಲೆಗಳನ್ನು ಹೊಂದಿರುವುದು ವಿಶೇಷ. ಇವತ್ತಿಗೂ ಐಪಿಎಲ್, ಟಿ20 ಮತ್ತು ಚಾಂಪಿಯನ್ಸ್ ಟ್ರೋಫಿ ಏಕದಿನ ಪಂದ್ಯ ಈ ಮೂರೂ ಪ್ರಕಾರಗಳಲ್ಲಿ ಶತಕಗಳನ್ನು ಹೊಡೆದ ಏಕೈಕ ಭಾರತೀಯ ಕ್ರಿಕೆಟಿಗ ಈತ.

ರೈನಾ ಅವರ ಇನ್ನೊಂದು ಸ್ಮರಣಾರ್ಹ ಸಂಗತಿಯೆಂದರೆ ಮಿಂಚಿನ ಫೀಲ್ಡಿಂಗ್. ಈತ ಚಿರತೆಯಂತೆ ಜಿಗಿದು ಕ್ಯಾಚ್ ಹಿಡಿದ, ಬೌಂಡರಿಗಳನ್ನು ತಡೆದ ಅದೆಷ್ಟೊಂದು ಅಪೂರ್ವ ಕ್ಷಣಗಳಿವೆ. ಭಾರತದ ಅತ್ಯುತ್ತಮ ಫೀಲ್ಡರ್‌ಗಳಲ್ಲಿ ಮೂವರ ಹೆಸರು ಹೇಳುವ ಪ್ರಸಂಗ ಬಂದರೆ ವಿರಾಟ್ ಕೊಹ್ಲಿ, ರವೀಂದ್ರ ಜಡೇಜಾ ಮತ್ತು ಸುರೇಶ್ ರೈನಾ ಅವರ ಹೆಸರೇ ಮೊದಲು ನೆನಪಿಗೆ ಬರುವುದು.

ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ನ ದೊಡ್ಡ ಶಕ್ತಿ ರೈನಾ. ಐಪಿಎಲ್‌ನಲ್ಲಿ ಒಟ್ಟು 5000 ರನ್‌ಗಳನ್ನು ಹೊಡೆದ ಮೊದಲ ಆಟಗಾರನೀತ! ಐಪಿಎಲ್‌ನ ಪ್ರತಿ ಸೀಸನ್‌ನಲ್ಲೂ 350ಕ್ಕಿಂತ ಹೆಚ್ಚು ರನ್ ಗಳಿಸುವುದು ಈತನಿಗೆ ನೀರು ಕುಡಿದಷ್ಟು ಸರಾಗ. ಐಪಿಎಲ್‌ನಲ್ಲಿ ರೈನಾ ಒಟ್ಟು ಗಳಿಸಿರುವ ರನ್‌ಗಳು 5368. ಈತನಿಗಿಂತ ಹೆಚ್ಚು ರನ್ ಗಳಿಸಿದ ಒಬ್ಬನೇ ಆಟಗಾರನೆಂದರೆ ಕೊಹ್ಲಿ. ಐಪಿಎಲ್‌ನಲ್ಲಿ ರೈನಾ ಇನ್ನು ಮುಂದೆಯೂ ಆಡುವುದರಿಂದ ಕೊಹ್ಲಿ ದಾಖಲೆಯನ್ನು ಮುರಿಯುವ ಸಾಧ್ಯತೆಯೂ ಇದೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65